REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No. PMG/BG/WPP-CO -1 /2021-2023
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

# ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)



# ವಾರ್ತಾಪತ್ರ

## ಕನ್ನಡ ಮಾಸ ಪತ್ರಿಕೆ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 36 ಏಪ್ರಿಲ್ 2023 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 04

## ಅಧ್ಯಕ್ಷರ ನುಡಿ

**ಈ** ಪ್ರಪಂಚದಲ್ಲಿ ಕೋಟಿ ಕೋಟಿ ಜನ ಹುಟ್ಟಿದ್ದಾರೆ, ಸತ್ತಿದ್ದಾರೆ, ಆದರೆ **ಲೋಕಾ ಸಮಸ್ತ ಸುಖಿನೋ ಭವಂತು ಎಂದು ಸಮಾಜದ ಹಿತಕ್ಕಾಗಿ ಕಾರ್ಯನಿರ್ವಹಿಸುವವರು ಮಾತ್ರ, ಸತ್ತ ಮೇಲೂ ಭೂಮಿಯ ಮೇಲೆ ಬದುಕುಳಿಯುತ್ತಾರೆಂಬುದು** ಸರ್ವಕಾಲಿಕ ಸತ್ಯ ಅಲ್ಲವೇ? ಮಾರ್ಚ್ 2023ರ ವಾರ್ತಾಪತ್ರ ಓದಿದ ಅಸಂಖ್ಯಾತ ಓದುಗರು/ಕುಲಭಾಂದವರು ಮಹಾಸಭೆಯ ಸಾಲು ಸಾಲು ಸೇವಾ ಕಾರ್ಯಕ್ರಮಗಳನ್ನು ಶ್ಲಾಘಿಸಿದ್ದಾರೆ, ಆನಂದಿಸಿದ್ದಾರೆ. ಭಾರತ ದೇಶದ ಯಾವುದೇ ರಾಜ್ಯದ ಆರ್ಯವೈಶ್ಯ ಸಂಘಟನೆಗಳಿಗಿಂತ ವೇಗವಾಗಿ ಬೆಳೆದು ಹೊರ ರಾಜ್ಯದ ಆರ್ಯವೈಶ್ಯ ಬಂಧುಗಳೂ ಸಹ ನಮ್ಮ **ಮಹಾಸಭೆ ಕಾರ್ಯವೈಖರಿಗೆ ಶಹಭಾಶ್ ಗಿರಿ** ನೀಡಿರುವುದು ನಮ್ಮ ರಾಜ್ಯದ ಆರ್ಯವೈಶ್ಯ ಜನತೆಗೆ ಸಂದ ಗೌರವ ಅಲ್ಲವೇ? **ಅರಗಿದ ಮೇಲೆ ಊಟವನ್ನು ಹೊಗಳಬೇಕು, ಗೆದ್ದ ಮೇಲೆ ಶೂರನನ್ನು ಹೊಗಳಬೇಕು, ಮೋಕ್ಷ ಪಡೆದ ಮೇಲೆ ತಪಸ್ವಿಯನ್ನು ಹೊಗಳಬೇಕು, ಕಾರ್ಯ ಸಾಧಿಸಿದ ಮೇಲೆ ಸಾಧಕನನ್ನು ಹೊಗಳಬೇಕು** ಎನ್ನುವುದು ಹಿರಿಯರ ನಾಣ್ನುಡಿ. ಆದರೆ ಇತ್ತೀಚಿನ ವರ್ಷಗಳಲ್ಲಿ ಕಾರ್ಯ ಮಾಡುವವರನ್ನು ಹೊಗಳದಿದ್ದರೆ ಬೇಡ, ಸಹಕರಿಸದಿದ್ದರೂ ಬೇಡ, ಅಡ್ಡಿಯುಂಟುಮಾಡದೆ ಸುಮ್ಮನಿದ್ದರೆ ಸಾಕು!!!


**ಬಡವರ ಮನೆಯ ಬಡತನದ ಕತ್ತಲನ್ನು ಹೊಡೆದಟ್ಟಿ ನೆಮ್ಮದಿಯ ಬದುಕು ಕಟ್ಟಿಕೊಡುವ ಅತ್ಯಂತ ವೈಶಿಷ್ಟ್ಯಪೂರ್ಣವಾದ ಉದ್ಯೋಗಮಿತ್ರ** ಎಂಬ ಯೋಜನೆಯನ್ನು ಮಹಾಸಭೆ ಲೋಕಾರ್ಪಣೆ ಮಾಡಿತು. ಹಿಂದಿನ ಸಂಚಿಕೆಯಲ್ಲಿ ಯೋಜನೆ ಬಗ್ಗೆ ತಿಳಿಸಿರುವಂತೆ, ನಾನಾ ಕಾರಣಗಳಿಂದ ಎಸ್‌ಎಸ್‌ಎಲ್‌ಸಿ/ಪಿಯುಸಿ ನಂತರದ ಶಿಕ್ಷಣವನ್ನು ಮಧ್ಯದಲ್ಲಿಯೇ ನಿಲ್ಲಿಸಿ ಅತಂತ್ರರಾಗಿರುವ ನಮ್ಮ ಯುವ ಜನತೆಯನ್ನು ಬೆಂಗಳೂರು ನಗರಕ್ಕೆ ಕರೆಸಿಕೊಂಡು ನಾಲ್ಕು ತಿಂಗಳುಗಳ ಕಾಲ ಉಚಿತ ಊಟ, ವಸತಿ ಜೊತೆಗೆ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ತಾಂತ್ರಿಕ ಶಿಕ್ಷಣ ಕೊಡಿಸಿ **ಉತ್ತಮವಾದ ಕಂಪನಿಗಳಲ್ಲಿ ಶೇ.100ರಷ್ಟು ಉದ್ಯೋಗ ಖಾತ್ರಿ ಮಾಡಿಸಿಕೊಡುವುದು** ಈ ಯೋಜನೆ ವೈಶಿಷ್ಟ್ಯ, ಪ್ರತೀ ವರ್ಷವೂ 100ಕ್ಕೂ ಹೆಚ್ಚು ಬಡಕುಟುಂಬಗಳಿಗೆ ಅದರಲ್ಲೂ ಎಸ್‌ಎಸ್‌ಎಲ್‌ಸಿ/ಪಿಯುಸಿ ಶಿಕ್ಷಣವನ್ನು ಮುಗಿಸಿ ಉತ್ತಮ ಉದ್ಯೋಗವಿಲ್ಲದೆ ಕಷ್ಟಪಡುತ್ತಿರುವವರಿಗೆ ಭವಿಷ್ಯದ ಆಶಾಜ್ಯೋತಿಯಲ್ಲವೇ ಈ ಯೋಜನೆ? ನೂರಾರು ಬಡ ಕುಟುಂಬಗಳ ಬವಣೆ ನೀಗಿಸುವ ಇಂತಹ ಮಹತ್ವ ಪೂರ್ಣ ಯೋಜನೆಗೆ ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭೆ, ಗುಪ್ತಾ ಎಜುಕೇಷನ್ ಸೊಸೈಟಿ, ವಾಸವೀ ವೇದ ಪಾಠಶಾಲೆಗಳ ಆಡಳಿತ ವರ್ಗವೂ ಸಂಪೂರ್ಣ ಸಹಕಾರ ನೀಡಿದೆ, ಯೋಜನೆ ಯಶಸ್ಸಿಗೆ ಕೈ ಜೋಡಿಸಿದೆ. ಆದರೆ **ಸರ್ವೇ ಜನಾಃ ಸುಖಿನೋ ಭವಂತು ಎಂದು ವೇದ ಕಲಿತು, ಪುರದ ಹಿತವನ್ನು ಕಾಪಾಡಬೇಕಾದ** ಒಂದು ಸಣ್ಣ ಗುಂಪು ಉದ್ಯೋಗಮಿತ್ರ ಯೋಜನೆಗೆ ವಿರೋದವನ್ನು ಮಾಡುತ್ತಾ, ಉದ್ಯೋಗಮಿತ್ರ ಯೋಜನೆ ಅನುಷ್ಠಾನವಾಗಬಾರದೆಂದು ಅಡ್ಡಿಯನ್ನುಂಟು ಮಾಡುತ್ತಿರುವುದು ಹುಬ್ಬೇರಿಸುವಂತೆ ಮಾಡಿದೆ. **ಕರ್ಮಕ್ಕೇ ನೂರು ದಾರಿ, ಧರ್ಮಕ್ಕೇ ಒಂದೇ ದಾರಿ, ಬುದ್ಧಿಗೆ ನೂರು ದಾರಿ, ಹೃದಯಕ್ಕೊಂದೇ ದಾರಿ, ಕೆಡುಕಿಗೆ ನೂರು ದಾರಿ, ಒಳಿತಿಗೆ ಒಂದೇ ದಾರಿ, ಸುಳ್ಳಿಗೆ ನೂರು ದಾರಿ, ಸತ್ಯಕ್ಕೆ** ಒಂದೇ ದಾರಿ ಎಂದು ಜಗತ್ತಿಗೆ ಸಾರುವ ವೇದಾಂತ ವಿದ್ಯೆಯನ್ನು ಕಲಿಸಿರುವ ನಮ್ಮ ಕೆಲವೇ ಕೆಲವು ವೈದಿಕ ಮಿತ್ರರು, ಉದ್ಯೋಗ ಮಿತ್ರ ಯೋಜನೆ ಅನುಷ್ಠಾನ ಆಗಬಾರದು ಎಂದು ಚರ್ಚಿಸಿ, ಅದಕ್ಕಾಗಿ ತಾವು ಕಲಿತ ವೇದ ಮಂತ್ರಗಳಿಂದ ಯೋಜನೆ ನಿಲ್ಲಿಸಲು ಮುಂದಾಗಿರುವುದು ಆಶ್ಚರ್ಯವೋ? ಅಸಹ್ಯವೋ? ತಿಳುವಳಿಕೆಯ ಕೊರತೆಯೋ? ಅರ್ಥವಾಗದ್ದಾಗಿದೆ.

ಬಂಧುಗಳೇ ಶುಭಕೃತು ಸಂವತ್ಸರದಿಂದ ಶೋಭಕೃತು ಸಂವತ್ಸರಕ್ಕೆ ಪಾದಾರ್ಪಣೆ ಮಾಡಿದ್ದೇವೆ. ಭಗವತಿ ಶ್ರೀ ವಾಸವಿ ಮಾತೆ ಅನುಗ್ರಹದಿಂದ ಪ್ರತಿಯೊಬ್ಬರೂ ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಗಳಿಂದ ನೆಮ್ಮದಿಯಾಗಿ ಬಾಳಿ ಬೆಳಗುವಂತಾಗಬೇಕು. **ಭಗವಂತನು ಮಾನವನಿಗೆ ನೀಡಿರುವ ಅತ್ಯದ್ಬುತ ಶಕ್ತಿಗಳಾದ ಪ್ರೀತಿ, ವಿಶ್ವಾಸ, ನಂಬಿಕೆಗಳನ್ನು ಹೃದಯಾಂತರಾಳದಲ್ಲಿಟ್ಟುಕೊಂಡು ನಡೆದುಕೊಂಡರೆ ಮನಸುಗಳ ಮಧ್ಯೆ ಇರಬಹುದಾದ ಗೋಡೆಗಳು ಬಿದ್ದು ವಿಶ್ವಾಸವೆಂಬ ಸೇತುವೆಗಳು ನಿರ್ಮಾಣವಾಗುತ್ತದೆ.** ಯಾರೊಬ್ಬರು ನಮ್ಮನ್ನು ಒಪ್ಪಲಿ ಬಿಡಲಿ, ಮುಖವಾಡ ಹಾಕಿ ಮೆಚ್ಚಿಸುವುದಕ್ಕಿಂತ, ನಾವು ನಾವಾಗಿರುವುದೇ ಚೆಂದ. ನಾಟಕೀಯತೆ, ಬೂಟಾಟಿಕೆ, ಆಷಾಡಭೂತಿತನ ನಂಬುವಷ್ಟು ನಮ್ಮ ಜೊತೆಗಾರರು ದಡ್ಡರಲ್ಲ. **ಬದುಕಿನ ಪಯಣದಲ್ಲಿ ನಮ್ಮ ಮನಸ್ಸನ್ನು ಅರಿತು ಹೋದವರಿಗಿಂತ ಮನಸ್ಸನ್ನು ಹರಿದು ಹೋದವರೇ ಜಾಸ್ತಿ ಇರುತ್ತಾರೆ,** ಆದರೆ ನಾವು ಅವರ ಸಾಲಿಗೆ ಸೇರದೆ ಉತ್ತಮ ಬಾಂಧವ್ಯಕ್ಕೆ ಆದರ್ಶಕರಾಗಬೇಕು.

## ಶ್ರೀ ವಾಸವಿ ಸಹಸ್ರ ಭಜನೋತ್ಸವ

ಮಲ್ಲೇಶ್ವರ ಆರ್ಯವೈಶ್ಯ ಸಂಘ, ಬೆಂಗಳೂರು ಇವರ ಒಂದು ಅಪೂರ್ವ ಕಲ್ಪನೆಯ ಕಾರ್ಯಕ್ರಮವಿದು. **1008 ಭಜನಾ ಸಂಘಗಳನ್ನು ಮತ್ತು 500 ದಿನಗಳಿಗೆ ಪ್ರವಚನಕಾರರನ್ನು ಸಂಘಟಿಸಿ, ಪ್ರತಿ ನಿತ್ಯ 500 ದಿನಗಳ ಕಾಲ ಭಜನೆ, ಪ್ರವಚನ ನಡೆಸುವ ಆಲೋಚನೆಯೇ ಕಲ್ಪನೆಗೆ ಮೀರಿದ್ದು.** ಕರ್ನಾಟಕ, ಆಂಧ್ರ, ತಮಿಳುನಾಡು ರಾಜ್ಯಗಳಿಂದ ಭಜನಾ ಕಲಾವಿದರು ಬಂದು **ಸಹಸ್ರ ಭಜನೋತ್ಸವ ಮಹಾಯಾಗದಲ್ಲಿ ತೊಡಗಿಸಿಕೊಂಡು ಧರ್ಮ ಜಾಗೃತಿಗೆ, ಲೋಕ ಕಲ್ಯಾಣಕ್ಕಾಗಿ** ಮಾಡುತ್ತಿರುವ ಇಂತಹ ಕಾರ್ಯಕ್ರಮಗಳು ನಾಡಿನೆಲ್ಲೆಡೆ ಆಗಾಗ್ಗೆ ನಡೆಯುವುದರಿಂದ ಲೋಕಕಲ್ಯಾಣದ ಜೊತೆ ಜೊತೆಗೆ ಕಲಾವಿದರ ಸಂಘಟನೆಯಾಗುತ್ತದೆ. ಧರ್ಮ ಸಂರಕ್ಷಣೆಗೆ ಇಂಬು ನೀಡಿದಂತಾಗುತ್ತದೆ. ಈ ಕಾರ್ಯಕ್ರಮದ ಪೂರ್ಣ ಮಾಹಿತಿಗಳನ್ನು, ಭಾಗವಹಿಸುವಿಕೆಯನ್ನು ಕೊನೆಯ ಪುಟದಲ್ಲಿ ನೀಡಲಾಗಿದೆ. ಜಾತ್ಯಾತೀತವಾಗಿ, ಹೆಣ್ಣು/ಗಂಡು ಭೇದವಿಲ್ಲದೆ ಸರ್ವರ ಭಾಗವಹಿಸುವಿಕೆಗೆ ಅವಕಾಶವಿರುವ ಈ ಕಾರ್ಯಕ್ರಮದ ಯಶಸ್ಸಿಗೆ ನೀವೂ ಕೈ ಜೋಡಿಸಬಹುದು, ಹೇಗೆಂದರೆ **ಈ ವಿಷಯವನ್ನು ಕನಿಷ್ಠ ಎರಡು ಭಜನಾ ಸಂಘಗಳಿಗೆ ತಿಳಿಸಿ,** ಮಾತೆ ಶ್ರೀ ವಾಸವಿ ದೇವಿಯ ಅನುಗ್ರಹಕ್ಕೆ ಪಾತ್ರರಾಗಿ.

**ಇವನು ನಮ್ಮವನು, ಇವನು ಪರಕೀಯನು ಎಂಬ ಭೇದವು ಕೇವಲ ಸಣ್ಣ ಮನಸ್ಸಲ್ಲಿರುತ್ತದೆ, ಜ್ಞಾನವಂತರು ಮಾತ್ರವೇ ಎಲ್ಲರೂ ನಮ್ಮವರೆಂದು ತಿಳಿಯುತ್ತಾರೆ.** ಯಾವುದೇ ಒಂದು ವಿಷಯದಲ್ಲಿ ಉದಾತ್ತವಾದ ಯೋಜನೆ, ಉದಾತ್ತವಾದ ನಡೆ, ಉದಾತ್ತವಾದ ನುಡಿ, ಇದು ಮುಂದೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬ ಹೃದಯ ಶ್ರೀಮಂತಿಕೆಯಿಂದ ಚಿಂತನೆ ಮಾಡಿದರೆ ಸಾಕು ಸ್ಪಷ್ಟವಾದ ದಾರಿ ಕಾಣುತ್ತದೆ. **ನಾವು ಬಯಸುವ ಬದುಕಿಗಿಂತ, ಸಮಾಜ ಮೆಚ್ಚುವಂತಹ ಬದುಕು ಹೆಚ್ಚು ಅರ್ಥಪೂರ್ಣವಲ್ಲವೇ.** ನಾವು ಕಲಿತ ವಿದ್ಯೆಯಿಂದ ನಮ್ಮ ಕುಟುಂಬದ ಪೋಷಣೆ ಆಗುವುದೊಂದೇ ಮುಖ್ಯವಲ್ಲ, ಇತರರನ್ನು ಬೆಳೆಸಿದರೆ ಮಾತ್ರ ಕಲಿತ ಶಿಕ್ಷಣಕ್ಕೆ ಮೌಲ್ಯ ಬರುತ್ತದೆ. **ಸ್ಮಶಾನದಲ್ಲಿ ಬಿದ್ದ ಬೂದಿಯನ್ನು ನೋಡಿ ಮನಸ್ಸು ಮೆಲ್ಲನೆ ನುಡಿಯಿತು, ಬರೀ ಬೂದಿಯಾಗಲು ಮನುಷ್ಯ ಜೀವನ ಪೂರ್ತಿ ಬೇರೆಯವರನ್ನೂ ನೋಡಿ ಉರಿಯುತ್ತಾನೆ ಎಂದು...** ಹಾಗಿದ್ದರೆ ನಮ್ಮ ಯೋಚನಾ ಲಹರಿ ಹೇಗಿರಬೇಕು...? **ಕರುಣಾಳು ಬಾ ಬೆಳಕೇ, ಮುಸುಕಿದೀ ಮಬ್ಬಿನಲಿ, ಕೈ ಹಿಡಿದು ನಡೆಸೆನ್ನನು, ಇರಳು ಕತ್ತಲೆಯ ಗವಿ ಮನೆ ದೂರ ಕನಿಕರಿಸಿ, ಕೈ ಹಿಡಿದು ನಡೆಸೆನ್ನನು,** ಎಂಬ ಬಿಎಂಶ್ರೀಯವರ ಕವನವೇ ನಮಗೆ ನಿತ್ಯ ಪ್ರಾರ್ಥನೆ ಆಗಬೇಕು. **ಕಾಯಕವೇ ಕೈಲಾಸ** ಅಲ್ಲವೇ.



ರಾ ಪ ರವಿಶಂಕರ್
ಅಧ್ಯಕ್ಷರು

ಕರ್ನಾಟಕ ಆರ್ಯವೈಶ್ಯ ಮಹಾಸಭಾ

# ವಿದ್ಯಾರ್ಥಿಮಿತ್ರ ಯೋಜನೆ 2022-23ನೇ ಸಾಲಿನ ಫಲಾನುಭವಿಗಳು

**ಶಿಕ್ಷಣವೇ ಶಕ್ತಿ,** ವ್ಯಕ್ತಿ ಶಕ್ತಿಯಾಗಿ, ಸದೃಢರಾಗಿ ರಾಷ್ಟ್ರ ನಿರ್ಮಾಣದ ಶಕ್ತಿಯಾಗಲು ಅತ್ಯಂತ ಅವಶ್ಯವಿರುವುದು ಶಿಕ್ಷಣ. ಆದರೇ ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ವ್ಯಾಪಾರೀಕರಣವಾಗಿ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತರಿಗೆ ಶಿಕ್ಷಣ, ಅದರಲ್ಲೂ ಉನ್ನತ ಶಿಕ್ಷಣ ಮರೀಚಿಕೆಯಾಗಬಾರದೆಂದು ಯೋಚಿಸಿ, ಪ್ರತಿಭಾವಂತ ವಿದ್ಯಾರ್ಥಿಗಳ ಸುಗಮ ವ್ಯಾಸಂಗಕ್ಕಾಗಿ ಮೂಡಿಬಂದ ಯೋಜನೆಯೇ **ವಿದ್ಯಾರ್ಥಿಮಿತ್ರ.**

ಈ ಯೋಜನೆಯಲ್ಲಿ 2 ಬಗೆಯ ವೈಶಿಷ್ಟ್ಯವಿದೆ. ಒಂದು ಆರ್ಥಿಕವಾಗಿ ಬಡ್ಡಿರಹಿತ ಹಾಗೂ ಆಧಾರರಹಿತ ಸಾಲಗಳನ್ನು ದೀರ್ಘಾವಧಿಯಲ್ಲಿ ಮರುಪಾವತಿ ಮಾಡುವುದು. ಎರಡನೆಯದಾಗಿ ಆರ್ಥಿಕವಾಗಿ ಹಿಂದುಳಿದ ಮತ್ತು ವೃತ್ತಪರ ಕೋರ್ಸುಗಳಲ್ಲಿ ಓದುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಲ್ಯಾಪ್‌ಟಾಪ್‌ಗಳನ್ನು ಉಚಿತವಾಗಿ ನೀಡುವುದು. ದಿನಾಂಕ 12-3-2023ರಂದು 5ನೇ ವರ್ಷದ ಲ್ಯಾಪ್‌ಟಾಪ್ ವಿತರಣೆ ಈ ಕೆಳಗೆ ಕಾಣಿಸಿರುವ 156 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, 47 ವಿದ್ಯಾರ್ಥಿಗಳಿಗೆ ಬಡ್ಡಿರಹಿತ ಸಾಲವನ್ನು ನೀಡಲಾಯಿತು. ಫಲಾನುಭವಿಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಬೆಂಗಳೂರು ನಗರದಲ್ಲಿ ಓದುತ್ತಿರುವ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ ಆರ್ ವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಪಿ ಶ್ಯಾಮ್ ಹಾಗೂ ಸುವರ್ಣ ಸುದ್ದಿವಾಹಿನಿ ಮತ್ತು ಕನ್ನಡಪ್ರಭ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಮಾನ್ಯ ಶ್ರೀ ರವಿ ಹೆಗಡೆ ಇವರ ಘನ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮವನ್ನು ಮಹಾಸಭೆ ಆವರಣದಲ್ಲಿ ನಡೆಸಲಾಯಿತು.




ಆರ್ ವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ ಪಿ ಶ್ಯಾಮ್‌ರವರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡುತ್ತಿರುವುದು



ಸುವರ್ಣ ಸುದ್ದಿ ವಾಹಿನಿಯ ಪ್ರಧಾನ ಸಂಪಾದಕರಾದ ಶ್ರೀ ರವಿ ಹೆಗ್ಗಡೆರವರು

## ಲ್ಯಾಪ್‌ಟಾಪ್ ಯೋಜನೆ-22-23

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಗೌರಿಕುಮಾರಿ ವಂಕಲಕುಂಟಿ | ಬಲರಾಮ ವಂಕಲಕುಂಟಿ | ಗುಳೇದಗುಡ್ಡ |
| ಶ್ರೇಯಸ್ ಡಿ ಕೆ | ಶ್ರೀನಿವಾಸ ಮೂರ್ತಿ ಡಿ ಕೆ | ಬೆಂಗಳೂರು |
| ದಿವ್ಯಶ್ರೀ ಎಂ | ಕೆ ಎನ್ ಮಧುಸೂದನ್ | ಬೆಂಗಳೂರು |
| ಶ್ರೇಯಸ್ ಎಸ್ | ಎನ್ ಸೋಮಶೇಖರ್ | ಬೆಂಗಳೂರು |
| ಸನತ್ ವಿ ಎಸ್ | ಸುಧಾಕರ್ ವಿ ಕೆ | ಬೆಂಗಳೂರು |
| ಸ್ಪಂದನಾ ಜಿ | ಗುರು ಪ್ರಸಾದ್ | ಬೆಂಗಳೂರು |
| ನಿತಿನ್ ಕುಮಾರ್ ಕೆ ಬಿ | ಕೆ ಎನ್ ಬಾಲಾಜಿ | ಬೆಂಗಳೂರು |
| ಹಿತೇಶ್ ಕೆ ಎಂ | ಮಂಜುನಾಥ ಕೆ ವಿ | ಬೆಂಗಳೂರು |
| ಶ್ರೀ ವೆಂಕಟ ಸಾಯಿ ರಾಮ ಗುಪ್ತಾ ವಿ | ಓಂಕಾರ್ ಆಂಜನೇಯುಲು ವಿ ವಿ | ಬೆಂಗಳೂರು |
| ಜಿ ವಿ ಹಿತೇಶ್ | ಜಿ ವೆಂಕಟೇಶ್ ಬಾಬು | ಬೆಂಗಳೂರು |
| ಗುರುಪ್ರಸಾದ್ ಮಾನಸಲಿ ಆರ್ | ರಾಜೇಶ್ ಮಾನಸಲಿ ಕೆ | ಬೆಂಗಳೂರು |
| ರಕ್ಷಿತಾ ಎಂ | ಮುರಳಿ ಕೃಷ್ಣ ಎಲ್ | ಬೆಂಗಳೂರು |
| ಎ ಮೇಘಮಾಲಾ | ಎ ನಟರಾಜ್ | ಆನೇಕಲ್ |
| ಅಶ್ವಿನಿ ಬಿ ಜಿ | ದಿವಂಗತ ಗೋಪಿ ಚಂದನ್ ಸಿ | ಬೆಂಗಳೂರು |
| ಲಿಖಿತಾ ಪಿ ಎಸ್ | ಸುರೇಶ್ ಬಾಬು ಪಿ ಎಸ್ | ಬೆಂಗಳೂರು |
| ಕೌಶಿಕ್ ವಿ | ವೆಂಕಟೇಶ್ ಬಾಬು ಕೆ | ಬೆಂಗಳೂರು |
| ಧನುಷ್ ಆರ್ | ರಾಜು ಪಿ ಆರ್ | ಬೆಂಗಳೂರು |
| ಮನ್ವಂತ್ ಎನ್ ಎನ್ | ನಾಗರಾಜ ಶೆಟ್ಟಿ ಎನ್ | ದೇವನಹಳ್ಳಿ |
| ಡಿ ವಿ ಗೋಕುಲ್ | ಜಿ ಕೆ ವರದರಾಜು | ದೊಡ್ಡಬಳ್ಳಾಪುರ |
| ಜಿ ಶ್ರೀನಿವಾಸ | ಜಿ ಸತ್ಯನಾರಾಯಣ | ಕಂಪ್ಲಿ |
| ಬಿ ಸ್ನೇಹ | ಬಿ ಹನುಮಂತಯ್ಯ | ಬಳ್ಳಾರಿ |
| ಕೃಷ್ಣ ಎಚ್ | ಕುಬೇರಶೆಟ್ಟಿ ಎಚ್ | ಸಿರಗುಪ್ಪಾ |
| ಪಿ ಸ್ವರೂಪ್ ಸಾಗರ್ | ಪಿ ಸುರೇಶ್ ಬಾಬು | ಬಳ್ಳಾರಿ |
| ಆಶಿವಿತಾ ಶೆಟ್ಟಿ | ನಾಗೇಶ ಶೆಟ್ಟಿ | ಕಂಪ್ಲಿ |
| ಎಚ್ ಕಾವ್ಯ | ಎಚ್ ಮಹಾಂತೇಶ ಶೆಟ್ಟಿ | ಕಂಪ್ಲಿ |
| ಕಾರ್ತಿಕ್ ಸಿ | ಸಿ ಜನಾರ್ದನ್ | ಬಳ್ಳಾರಿ |
| ಲಕ್ಷ್ಮೀತಾ ಎ | ಲಕ್ಷ್ಮೀ ನಾರಾಯಣ ಶೆಟ್ಟಿ ಎ | ಕುರ್ಗೋಡ್ |
| ಬಾಲಾಜಿ ಎ | ಲಕ್ಷ್ಮೀಪತಿ ಶೆಟ್ಟಿ ಎ | ಕಂಪ್ಲಿ |
| ನಯನಾ ಕೆ | ಕೆ ಅರುಣ್ ಕುಮಾರ್ | ಬಳ್ಳಾರಿ |
| ಜಿ ವೈಷ್ಣವಿ | ಜಿ ರಾಘವೇಂದ್ರ ಶೆಟ್ಟಿ | ಕಂಪ್ಲಿ |
| ಎಂ ಸ್ಫೂರ್ತಿ | ಎಂ ಜಿಡೇಶ್ ಶೆಟ್ಟಿ | ಬಳ್ಳಾರಿ |
| ಪಿ ಮುರಾರಿ ಶೆಟ್ಟಿ | ಪಿ ಶ್ರೀಧರ ಶೆಟ್ಟಿ | ಬಳ್ಳಾರಿ |
| ಸಿ ಎಚ್ ಶ್ರೇಯಾ | ಸಿ ಎಚ್ ರಾಮು | ಬಳ್ಳಾರಿ |
| ಜಿ ಸುದೀಪ್ | ಜಿ ಸುಬ್ರಹ್ಮಣ್ಯ ಶೆಟ್ಟಿ | ಕಂಪ್ಲಿ |
| ಅಮೃತ ವಿ | ದತ್ತಯ್ಯ ಶೆಟ್ಟಿ ವಿ | ಸಿರಗುಪ್ಪಾ |
| ಅನೂಪ್ ಎಸ್ ವಿ | ದಿವಂಗತ ಎಸ್ ಟಿ ವೆಂಕಟೇಶ ಶೆಟ್ಟಿ | ಸಂಡೂರ |
| ಗಣೇಶ್ ಪಿ | ಸುರೇಶ್ ಪಿ | ಬಳ್ಳಾರಿ |
| ನಾಗರೇಶ್ ಇ | ಇ ಹನುಮಂತಯ್ಯ | ಬಳ್ಳಾರಿ |
| ಮಧುರಾ ಜಾಜೀ | ಜ್ಯೋತಿಷ್ ಜಾಜೀ | ಹುಮನಾಬಾದ್ |
| ಅಭಿಷೇಕ | ಸಂಗಮೇಶ | ಹುಮನಾಬಾದ್ |
| ದರ್ಶನ್‌ಶಿವ ಎಂ ಎಂ | ಮಂಜುನಾಥ್ ಎಂ ಎಸ್ | ಕಡೂರು |
| ಲಕ್ಷ್ಮಿ ಕೆ | ಕೃಷ್ಣ ಮೂರ್ತಿ ಎ ಎನ್ | ಕಡೂರು |
| ಜಿ ರಂಗ ಲಲಿತಾ ಜಾಹ್ನವಿ | ಜಿ ಸುಧಾಕರ ರಾವ್ | ಚಿಕ್ಕಮಗಳೂರು |
| ಅಮೋಘ ಶೆಟ್ಟಿ ಎಂ | ಇ ವಿ ಮುರಳಿ ಕೃಷ್ಣ | ಬಾಗೇಪಲ್ಲಿ |
| ಭಾರ್ಗವಿ ಎಂ.ವಿ | ಎಂಎಸ್ ವರಧಾ ರಾಜು ಗುಪ್ತಾ | ಬಾಗೇಪಲ್ಲಿ |
| ಹರ್ಷಿಲ್ ಸಿ ಎನ್ | ಸಿ ಆರ್ ನಾಗರಾಜ | ಗುಡಿಬಂಡೆ |
| ಮೈತ್ರೇಯ ಟಿ ಎಂ | ಮಂಜುನಾಥ ಗುಪ್ತಾ ಟಿ ವಿ | ಬಾಗೇಪಲ್ಲಿ |
| ನೀರಜ್ ವಿ ಕೆ | ಲೇಟ್ ವಿ ಎಸ್ ಕಾಶಿನಾಥ್ | ಶಿಡ್ಲಘಟ್ಟ |
| ನಿಖಿಲ್ ಎನ್ ಕುಮಾರ್ | ದಿವಂಗತ ನರೇಂದ್ರ ಕುಮಾರ್ ಎನ್ | ಗೌರಿಬಿದನೂರು |
| ಪಾವನಿ ಎ ಎಂ | ಟಿ ಪಿ ಅಶೋಕ್ ಕುಮಾರ್ | ಶಿಡ್ಲಘಟ್ಟ |
| ಶ್ರೇಯಾ ಎಸ್ ಕೆ | ಕೃಷ್ಣ ಮೂರ್ತಿ ಎಸ್ ಎ | ಚಿಂತಾಮಣಿ |
| ಶ್ರುತಿ ಕೆ ವಿ | ಕೆ ವೆಂಕಟಾಚಲಪತಿ ಶೆಟ್ಟಿ | ಬಾಗೇಪಲ್ಲಿ |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಸ್ಕಂದನ್ ಎಂ ಎಂ | ಮಂಜುನಾಥ ಎಂ ಆರ್ | ಶಿಡ್ಲಘಟ್ಟ |
| ಶ್ರೀಕಾಕುಲಂ ಹಿಮಾ ಬಿಂದು | ಶ್ರೀಕಾಕುಲಂ ಪ್ರಕಾಶ್ | ಬಾಗೇಪಲ್ಲಿ |
| ಸುರಭಿ ಬಿ ವಿ | ಲೇಟ್ ಬಿ ಎಸ್ ವೆಂಟಕೇಶ್ ಬಾಬು | ಶಿಡ್ಲಘಟ್ಟ |
| ಸುಸ್ಮಿತಾ ಪಿ ಕೆ | ಕಾಶಿನಾಥ್ ಪಿ ವಿ | ಗೌರಿಬಿದನೂರು |
| ಸ್ವಾತಿ ಬಿ ಎಸ್ | ಶ್ರೀನಿವಾಸ ಆರ್ | ಚಿಂತಾಮಣಿ |
| ಚಿನ್ಮಯ್‌ಕುಮಾರ್ ಗುಪ್ತಾ ಇ ಪಿ | ಇ ಪ್ರಕಾಶ್ ಬಾಬು | ಹಿರಿಯೂರು |
| ಲಕ್ಷ್ಮೀನಾರಾಯಣ ಎಸ್ | ಸತೀಶ್ ಬಾಬು ಜಿ ಎಸ್ | ಚಳ್ಳಕೆರೆ |
| ಮನೀಶ್ ಕುಮಾರ್ ಕೆ ಎಂ | ಮಾಲತೇಶ ಕುಮಾರ್ ಕೆ ಜಿ | ಚಿತ್ರದುರ್ಗ |
| ಮಂಜುನಾಥ ಎ ಎನ್ | ನಾಗೇಶ್ ಬಾಬು ಎ ಎನ್ | ಚಿತ್ರದುರ್ಗ |
| ಭವಾನಿ ಎಸ್ ಎಂ | ಮಂಜುನಾಥ ಎಸ್ ಎನ್ | ದಾವಣಗೆರೆ |
| ಭವಾನಿ ವಿ ಆರ್ | ದಿವಂಗತ ರಾಘವೇಂದ್ರ ವಿ | ಮಲೇಬೆನ್ನೂರು |
| ದೀಪಿಕಾ ಎನ್ | ಎಸ್ ನಾಗರಾಜ್ ಶೆಟ್ಟಿ | ದಾವಣಗೆರೆ |
| ನಿತಿನ್ ಇ ಎನ್ | ನಾಗರಾಜ ಶೆಟ್ಟಿ ಕೆ | ದಾವಣಗೆರೆ |
| ಸ್ಪಂದನಾ ಡಿ ಆರ್ | ರಮೇಶ್ ಎನ್ | ದಾವಣಗೆರೆ |
| ಶ್ರೀ ಗೌರಿ ಎಂ ವಿ | ವಿನಾಯಕ ಶೆಟ್ಟಿ ಎಂ ವಿ | ಮಲೇಬೆನ್ನೂರು |
| ಸುಧನ್ವ ಎಚ್ ಎ | ಅಶ್ವತ್ಥನಾರಾಯಣ ಎಚ್ | ದಾವಣಗೆರೆ |
| ಸಂದೀಪ್ ಪಿ ಸವಣೂರು | ಪ್ರಕಾಶ್ ಸವಣೂರು | ಕುಂದಗೋಳ |
| ಕೃತಿಕಾ ಮಂಜುನಾಥ ಬಾಗಲಕೋಟಿ | ಮಂಜುನಾಥ ರುದ್ರಣ್ಣ ಬಾಗಲಕೋಟಿ | ಹುಬ್ಬಳ್ಳಿ |
| ಪ್ರಿಯಾ ಬಿ ವಡವಾಡಗಿ | ಭೀಮರಾಜ್ | ಹುಬ್ಬಳ್ಳಿ |
| ಕುನಾಲ್ ಕೆ ಹಾರನಹಳ್ಳಿ | ಕಿರಣ್ ಹೆಚ್ ಎಸ್ | ಅರಸೀಕೆರೆ |
| ಚಂದನ ಆರ್ | ಇ ರಮೇಶ್ | ಅರಸೀಕೆರೆ |
| ಚಿನ್ಮಯಿ ರಾಘವೇಂದ್ರ ಮೇಲಗಿರಿ | ರಾಘವೇಂದ್ರ | ಶಿವಗವಿ |
| ಶ್ರೀನಿಧಿ ಎಲ್ ಬಿಜಾಪುರ | ಲಕ್ಷ್ಮೀನಾರಾಯಣ | ಬ್ಯಾಡಗಿ |
| ನಾಗದೀಪ ಅರುಣಕುಮಾರ ಹಮ್ಮಿಗಿ | ಅರುಣ್‌ಕುಮಾರ್ | ಹಿರೇಕೆರೂರು |
| ಶ್ರೀನಿವಾಸ ಬಾವಗಿ | ಸಂಗಮೇಶ್ವರ ಬಾವಗಿ | ಗುಲ್ಬರ್ಗ |
| ಕಾರ್ತಿಕ್ ಮೈಲಾಪುರ | ಶ್ರೀನಿವಾಸ ಮೈಲಾಪುರ | ಸೇಡಮ್ |
| ಅಲೇಖ್ಯಾ ಪಿ ಸಿ | ಚಾಯಿನಾಥ ಪಿ ಸಿ | ಶ್ರೀನಿವಾಸಪುರ |
| ಬಿ ಎಸ್ ಧೀರಜ್ | ವಿ ಶ್ರೀನಿವಾಸ ಬಾಬು | ಬಂಗಾರಪೇಟೆ |
| ಬಿ ವಿ ಪಾವನಿ | ಬಿ ಆರ್ ವೆಂಕಟ ಪ್ರಸಾದ್ | ಮುಳಬಾಗಲು |
| ಬಾಲಾಜಿ ಎನ್ | ನಾಗೇಂದ್ರ ಪ್ರಸಾದ್ ವಿ | ಕೋಲಾರ |
| ಚೈತ್ರ ಎಸ್ ಪಿ | ಪ್ರಕಾಶ್ ಗುಪ್ತಾ ಎಸ್ ಆರ್ | ಕೋಲಾರ |
| ಚಂದನ್ ವಿ | ವಿಜಯ್ ಕುಮಾರ್ ವಿ | ಮುಳಬಾಗಲು |
| ಹಾರಿಕಾ ಪಿ ಎಂ | ಮಂಜುನಾಥ ಗುಪ್ತಾ ಪಿ ಸಿ | ಶ್ರೀನಿವಾಸಪುರ |
| ಕೆ ಎಸ್ ಸಾಹಿತಿ | ಕೆ ವಿ ಸುನಿಲ್ ಕುಮಾರ್ | ಮುಳಬಾಗಲು |
| ನಾಗಶ್ರೀ ಎನ್ ಎಸ್ | ಶ್ರೀನಿವಾಸ್ ಎನ್ ಪಿ | ಮಾಲೂರು |
| ನವ್ಯಶ್ರೀ ಆರ್ | ರಾಮಕೃಷ್ಣ ಎ | ಶ್ರೀನಿವಾಸಪುರ |
| ಪಿ ಎಸ್ ಮುಕ್ತಿತೇಜ | ಎ ಸೀತಾರಾಮಯ್ಯ ಶೆಟ್ಟಿ | ಕೋಲಾರ |
| ಪೂಜಾ ಜಿ ಎಸ್ | ಶ್ರೀನಾಥ್ ಜಿ | ಶ್ರೀನಿವಾಸಪುರ |
| ಪೂಜಿತಾ ಕೆಯು | ಉದಯಶಂಕರ್ ಎ | ಕೋಲಾರ |
| ಪೂಜಿತಾ ಡಿ ಎಂ | ಮಂಜುನಾಥ ಡಿ ಎಸ್ | ಶ್ರೀನಿವಾಸಪುರ |
| ಪ್ರಜ್ವಲ್ ಕೆ ಆರ್ | ರಾಘವೇಂದ್ರ ಕೆ ಎಸ್ | ಮುಳಬಾಗಲು |
| ಶರಣ್ಯ ಪಿ ವಿ | ವೆಂಕಟೇಶ್ ಬಾಬು ಪಿ ಎಸ್ | ಮುಳಬಾಗಲು |
| ಶಶಾಂಕ್ ಎಂ | ಎಸ್ ಮಂಜುನಾಥಯ್ಯ | ಶ್ರೀನಿವಾಸಪುರ |
| ಶ್ರೀಜಾ ಜಿ | ಗೋಪಾಲಶೆಟ್ಟಿ ಟಿ | ಬಂಗಾರಪೇಟೆ |
| ತುಳಸಿ ಕೆ ಜಿ | ಗೀತಾನಂದಂ ಕೆ ಆರ್ | ಮುಳಬಾಗಲು |
| ಅಮೃತ ಕಡಬೂರು | ಜಯರಾಮ್ ಕಡಬೂರು | ಕಾರಟಗಿ |
| ಬಾಲಾಜಿ | ಅಶ್ವತ್ಥ ನಾರಾಯಣ | ಕೊಪ್ಪಳ |
| ಕೆ ಸುದೀಪ್ | ಕೆ ಶಾಂತಕುಮಾರ್ | ಕೊಪ್ಪಳ |
| ಕೀರ್ತಿ | ಬಿ ರಾಮ ಶೆಟ್ಟಿ | ಗಂಗಾವತಿ |
| ಎಸ್ ನಾಗ ಅನ್ನಪೂರ್ಣ ಶ್ರೀ ಗೀತಿಕಾ | ಎಸ್ ಶ್ರೀ ರಾಮ್ ಕುಮಾರ್ | ಗಂಗಾವತಿ |
| ಟಿ ವಿಷ್ಣುಗುಪ್ತ | ದಿವಂಗತ ಟಿ ಗೋವಿಂದರಾಜ್ ಗುಪ್ತಾ | ಗಂಗಾವತಿ |
| ತರುಣ್ ಕುಮಾರ್ | ಗಂಗಾಧರ್ | ಕೊಪ್ಪಳ |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| | | |
| ವಿನಾಯಕ | ಗೋಪಾಲ ಕೃಷ್ಣಶೆಟ್ಟರ್ | ಕುಷ್ಟಗಿ |
| ಯಶಸ್ವಿನಿ ಎಸ್ ಆರ್ | ರಾಜೇಶ್ ಎಸ್ ವಿ | ಕೆ ಆರ್ ಪೇಟೆ |
| ನಾಗಪ್ರಜ್ವಲ್ ಕೆ ಆರ್ | ಎಚ್ ಎಸ್ ರಾಜೇಶ್ | ಕೆ ಆರ್ ಪೇಟೆ |
| ರವಿ ರಾಘವೇಂದ್ರ ಜಿ ಎಸ್ | ದಿವಂಗತ ಶಶಿಕುಮಾರ್ ಜಿ ಎನ್ | ಮೈಸೂರು |
| ಸೇಜಲ್ ಶೆಟ್ಟಿ ಎಸ್ | ಎನ್ ಸತೀಶ್ | ಮೈಸೂರು |
| ಅಭಿರಾಮ್ ಶೆಟ್ಟಿ | ಸೋಮನಾಥ ಶೆಟ್ಟಿ | ಲಿಂಗಸುಗೂರು |
| ಆಕಾರಪು ಶ್ರೀವಲ್ಲಿ | ಎ ಪ್ರಹ್ಲಾದ | ರಾಯಚೂರು |
| ಆಮೋದಿನಿ ಕೆ | ವೆಂಕಟೇಶ್ ಕೆ | ಮಾನ್ವಿ |
| ಭಾರ್ಗವಿ | ವಿಠೋಬಾ | ಲಿಂಗಸುಗೂರು |
| ಸಿ ಎಚ್ ಭಾರ್ಗವತೇಜ ವರ್ಧನ್ | ಸಿ ಎಚ್ ಏಕಾಂಬರ ರಾವ್ | ಲಿಂಗಸುಗೂರು |
| ಸಿ ಸಾಯಿ ಪ್ರೀತಂ | ಸಿ ಶ್ಯಾಮ್ ಕುಮಾರ್ | ರಾಯಚೂರು |
| ದರೂರ್ ಈಶ್ವರ್ | ಡಿ ವೆಂಕಟೇಶ್ | ರಾಯಚೂರು |
| ಕೆ ಸಿ ಶ್ರೇಯಾ | ಕೆ ಸಿ ವೀರೇಶ್ | ರಾಯಚೂರು |
| ಕೆ ರಾಘವೇಂದ್ರ | ಕೆ ಗೋಪಾಲ ಕೃಷ್ಣ | ರಾಯಚೂರು |
| ಮಂಜುನಾಥ ಚೌದ್ರಿ | ವಿಟ್ಟಪ್ಪ ಚೌದ್ರಿ | ರಾಯಚೂರು |
| ಮೋಹನ್ | ಮಲ್ಲಯ್ಯ | ಲಿಂಗಸುಗೂರು |
| ಪವನಕುಮಾರ್ ಪಿ | ಪಿ ಪ್ರಕಾಶ್ ಶೆಟ್ಟಿ | ಮಾನ್ವಿ |
| ಶಶಾಂಕ್ ಕೊಂಪಲ್ | ಮಧುಸೂದನ್ ಕೊಂಪಲ್ | ಲಿಂಗಸುಗೂರು |
| ಶಶಾಂಕ್ ಎಂ | ಎಂ ಮಲ್ಲಯ್ಯ | ಸಿಂಧನೂರು |
| ಟಿ ಮಂಜುನಾಥ | ಟಿ ವರದರಾಜ್ | ಮಾನ್ವಿ |
| ಭೂಮಿಕಾ ಕೆ ಜಿ | ಗುರುರಾಜ ಕೆ ಎಸ್ | ಶಿವಮೊಗ್ಗ |
| ಹರ್ಷಿತ್ ಜಿ ಕೆ | ಕೃಷ್ಣಮೂರ್ತಿ ಜಿ ಆರ್ | ಶಿವಮೊಗ್ಗ |
| ಪ್ರತೀಕ್ ಎಸ್ ಪಿ | ಪ್ರವೀಣ್ ಎಚ್ ಆರ್ | ಶಿವಮೊಗ್ಗ |
| ಸಹನಾ ಸು | ಎಸ್ ಉಮೇಶ್ | ಶಿವಮೊಗ್ಗ |
| ಸಿಂಚನಾ ಎಸ್ | ಸತೀಶ್ ಎಸ್ | ಶಿವಮೊಗ್ಗ |
| ಅನುಶ್ರೀ | ಅಮರನಾಥ | ಪಾವಗಡ |
| ಭುವನಾ ಎನ್ ಬಿ | ಎನ್ ಬದರಿನಾಥ್ | ತುಮಕೂರು |
| ಚರಣ್ ಕುಮಾರ್ ಎಸ್ ಎನ್ | ಸತ್ಯನಾರಾಯಣ ಗುಪ್ತ ಎಸ್ ಎನ್ | ಪಾವಗಡ |
| ದೀಪ್ತಿ ಜಿ ಎನ್ | ನಾಗರಾಜು ಜಿ ಆರ್ | ಪಾವಗಡ |
| ಧನಲಕ್ಷ್ಮಿ ಟಿ ಎ | ಟಿ ಎನ್ ಅನಂತ ಪದ್ಮನಾಭ | ತುಮಕೂರು |
| ಹರೀಶ್ ಎಸ್.ಎನ್ | ನಂದನ್ ಬಾಬು ಎಸ್.ಎನ್ | ಕೊರಟಗೆರೆ |
| ಮನು ಎನ್ | ನಟರಾಜು.ಜಿ | ಪಾವಗಡ |
| ಮೋಹನ್ ಟಿ ಜಿ | ಟಿ ಎಚ್ ಗೋಪಾಲಕೃಷ್ಣ ಶೆಟ್ಟಿ | ಮಧುಗಿರಿ |
| ನಾಗಶ್ರೀ ಎಸ್ | ಶ್ರೀಧರ್ ಗುಪ್ತಾ ಎನ್ | ಪಾವಗಡ |
| ನಿತಿನ್ ಎಂ | ಮುರಳಿಕೃಷ್ಣ ಎಂ ಎಸ್ | ಪಾವಗಡ |
| ಪವನ್ ಆರ್ | ರಮೇಶ್ ಬಾಬು ಎಸ್ | ಮಧುಗಿರಿ |
| ಪ್ರಣತಿ ಟಿ ಎಸ್ | ಶ್ರೀನಾಥ್ ಟಿ ವಿ | ತುಮಕೂರು |
| ಸಾಯಿ ಲಿಖಿತ್ ಓ | ವೇಣು ಗೋಪಾಲ್ ಓ | ಪಾವಗಡ |
| ಸಾಯಿ ಶ್ರೀವಲ್ಲಿ ಇ | ಇ ಶ್ರೀನಿವಾಸ್ | ತುಮಕೂರು |
| ಸನತ್ ಕೆ ಜಿ | ಗಂಗಾಧರಗುಪ್ತ ಕೆ ಎನ್ | ಪಾವಗಡ |
| ಸಂಜನಾ ಬಿ ಆರ್ | ರವಿಕುಮಾರ್ ಎಸ್ | ಪಾವಗಡ |
| ಸುಜಿತ್ ಬಿ ಎಸ್ | ಶ್ರೀಧರ ಬಿ ಎಸ್ | ತಿಪಟೂರು |
| ಸುಕುಮಾರ್ ಆರ್.ಎ | ರಾಮ ಕೃಷ್ಣ ಪ್ರಸಾದ್ | ಪಾವಗಡ |
| ವಾತ್ಸಲ್ಯ ಆರ್ | ರವಿ ಎಸ್ | ಪಾವಗಡ |
| ಬಿ ಸುಹಾಸ್ | ಆನಂದ್ ಕುಮಾರ್ | ಕೂಡ್ಲಿಗಿ |
| ಎಸ್ ವಿಷ್ಣು ಪ್ರಸಾದ್ | ಎಸ್ ಹನುಮಂತ ಶೆಟ್ಟಿ | ಹೊಸಪೇಟೆ |
| ಚಂದನ | ಶಿವಶಂಕರ್ | ಕೋರಾಪುರ |
| ದಿವಾಕರ್ ವೆಂಕಟೇಶ್ ಶೆಟ್ಟಿ | ವೆಂಕಟೇಶ ಶೆಟ್ಟಿ | ಕೋರಾಪುರ |
| ರಕ್ಷಿತಾ | ಲಕ್ಷ್ಮೀನಾರಾಯಣ್ | ದೊಡ್ಡಬಳ್ಳಾಪುರ |
| ಸೌಜನ್ಯ ವಿ ವಡವಡಗಿ | ವೆಂಕಟೇಶ ವಡವಡಗಿ | ನರಗುಂದ |
| ಇಂದ್ರಕುಮಾರ್ ಮುದೇನೂರು | ಜಗದೀಶ | ಮುಂಡರಗಿ |

# ವಿದ್ಯಾರ್ಥಿಮಿತ್ರ ಬಡ್ಡಿ ರಹಿತ ಸಾಲ ಯೋಜನೆ-22-23



ವಿದ್ಯಾರ್ಥಿಮಿತ್ರ ಯೋಜನೆಯಡಿ ಸಾಲ ಸೌಲಭ್ಯ ಪಡೆದಿರುವ ವಿದ್ಯಾರ್ಥಿಗಳ ತಂಡ ಮಹಾಸಭೆ ಕಾರ್ಯಕರ್ತರೊಂದಿಗೆ

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಅಥರ್ವಮುರಳೀಧರ ಬೆಟದೂರು | ಮುರಳೀಧರ್ ಎ ಆರ್ | ಬಾಗಲಕೋಟೆ |
| ವಸಂತ ಪಿ ಆರ್ | ರವೀಂದ್ರನಾಥ್ ಪಿ ಎಲ್ | ಬೆಂಗಳೂರು |
| ಚಿರಂತ್ ಬಿ ಆರ್ | ರಾಜೇಂದ್ರ ಗುಪ್ತ ಬಿ ಎನ್ | ಬೆಂಗಳೂರು |
| ವರ್ಷಿಣಿ ಡಿ ಎ | ಆದಿ ಪ್ರಕಾಶ್ ಗುಪ್ತ ಡಿ ಆರ್ | ಬೆಂಗಳೂರು |
| ಸುಪ್ರೀತ್ ಆರ್ ಬೇಟದೂರು | ರಾಘವೇಂದ್ರ ಬೆಟದೂರು | ದೊಡ್ಡಬಳ್ಳಾಪುರ |
| ಇ ಶ್ರೀವಾಸ್ತವ್ | ಇ ರಾಜಶೇಖರ್ | ಕಂಪ್ಲಿ |
| ವೆಂಕಟೇಶ್ ಕೆ | ಮುರಳಿ ಕೃಷ್ಣ ಕೆ | ಬಳ್ಳಾರಿ |
| ಶ್ರೀನಿವಾಸ ಎಂ | ಪುಲ್ಲರಾವ್ | ಸಿರುಗುಪ್ಪ |
| ವಿದ್ಯಾ ಎಂ ಸಾಗರ್ | ವೆಂಕಟೇಶ್ ಎಂ | ಬಳ್ಳಾರಿ |
| ನಿಖಿಲ್ ಕೆ | ಪ್ರಕಾಶ್ ಕೆ | ಬಳ್ಳಾರಿ |
| ಅಶ್ವಿತಾ ಕೆ | ನಾಗೇಶ ಶೆಟ್ಟಿ ಕೆ | ಬಳ್ಳಾರಿ |
| ಎಂ ಕೀರ್ತಿ | ಎಂ ಜಡೇಶ್ ಶೆಟ್ಟಿ | ಬಳ್ಳಾರಿ |
| ವೆಂಕಟ ಸಾಯಿ ಕುಮಾರ್ ಸಿ | ಶ್ರೀಧರ್ ಗುಪ್ತಾ ಸಿ | ಬಳ್ಳಾರಿ |
| ಸಾಯಿ ಪ್ರಮೋದ್ ಬಿ | ಗಣೇಶ್ ಕುಮಾರ್ ಬಿ | ಬಳ್ಳಾರಿ |
| ಅಂಜಲಿ | ವೇಣುಗೋಪಾಲ್ ಗಡ | ಬೀದರ್ |
| ಹರೀಶ್ | ವೆಂಕಟೇಶ್ | ಬೀದರ್ |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ವೈಭವಿ | ವೆಂಕಟೇಶ್ | ಬೀದರ್ |
| ಅಮೂಲ್ಯ ವಿ | ವೆಂಕಟೇಶ್ ಎಲ್ | ಚಿತ್ರದುರ್ಗ |
| ಸಾಯಿ ರಕ್ಷಿತ್ ಎನ್ ವಿ | ವಸಂತ ಗುಪ್ತ ಎನ್ | ಚಿತ್ರದುರ್ಗ |
| ಮೋನಾ ಜಿ | ಡಿ ಎಚ್ ಗುರುಪ್ರಸಾದ್ | ಚಿತ್ರದುರ್ಗ |
| ಮಯೂರಿ ಎಂ | ಮೋಹನ್ ರಾಮ್ ಹೆಚ್ ಎಸ್ | ಚಳ್ಳಕೆರೆ |
| ಪವನ್ ಎನ್ ಚೌಟಿ | ನಟರಾಜ್ ವಿ ಚೌಟಿ | ದಾವಣಗೆರೆ |
| ಶರ್ವಾಣಿ ಎ | ಶ್ಯಾಮ್ ಪ್ರಸಾದ್ ಎ | ದಾವಣಗೆರೆ |
| ಕನ್ನಿಕಾ ಬಿ ಸಿ | ಬಿ ಎಸ್ ಚಂದ್ರಶೇಖರ ಶೆಟ್ಟಿ | ದಾವಣಗೆರೆ |
| ದಿವ್ಯಶ್ರೀ ಡಿ ಶೆಟ್ಟಿ | ದತ್ತಾತ್ರೇ ಶೆಟ್ಟಿ | ಧಾರವಾಡ |
| ಸುಮೇಧಾ ಬಾಗಲಕೋಟಿ | ಕುಶಾ | ಗದಗ |
| ಶ್ರುತಿಕಾ ಬಿ ಎ | ಅಶೋಕ್ ಕುಮಾರ್ ಬಿ ಎನ್ | ಶ್ರೀನಿವಾಸಪುರ |
| ಹಿತಿಶಿ ಆರ್ ವರದಾ | ರವಿಕುಮಾರ್ ಎಸ್ | ಕೋಲಾರ |
| ಅಖಿಲ್ ಕೆ ಪಿ | ಪರಮೇಶ್ ಕೆ ಎಂ | ನಾಗಮಂಗಲ |
| ಅಮೂಲ್ಯ ಟಿ | ವಿಠೋಬಯ್ಯ ಶೆಟ್ಟಿ ಟಿ | ಮಾನ್ವಿ |
| ಟಿ ಸಿ ವಿಷ್ಣುಪ್ರಿಯಾ | ಟಿ ಸಿ ತಿಮ್ಮಯ್ಯ | ರಾಯಚೂರು |
| ನರಸಯ್ಯ | ಪ್ರಕಾಶ್ | ರಾಯಚೂರು |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಆರ್ ಪ್ರಣೀತ್ | ಆರ್ ಭೀಮೇಶ್ | ರಾಯಚೂರು |
| ವೆಂಕಟೇಶ್ ಎಂ | ಎಂ ಶ್ರೀನಿವಾಸ್ | ರಾಯಚೂರು |
| ಸಮೀಕ್ಷಾ ಎಂ ಪಿ | ಪ್ರವೀಣ್ ಕುಮಾರ್ ಮೂರ್ತಿ ಎಂ | ಶಿವಮೊಗ್ಗ |
| ನಾಗಸುರಕ್ಷಿತ್ ಕೆ ಆರ್ | ಕೆ ಎಸ್ ರಮೇಶ್ | ಶಿವಮೊಗ್ಗ |
| ಬಿ ಎಸ್ ಚಂದನ್ | ಬಿ ಕೆ ಸತೀಶ್ ಬಾಬು | ತುಮಕೂರು |
| ಮೈತ್ರಿ ಎ ಎನ್ | ನಾಗರಾಜ ಶೆಟ್ಟಿ ಎ | ಪಾವಗಡ |
| ಶ್ರೀರಾಕ್ಷ ಬಿ ಜಿ | ಗೋವಿಂದರಾಜು ಎಚ್ ಜಿ | ತುಮಕೂರು |
| ಅಕ್ಷತಾ ಪಿ ಎಸ್ | ಸುಜಿತ್ ಕುಮಾರ್ | ತುಮಕೂರು |
| ನಿರ್ಮಿತ್ ಎ | ಆದಿನಾರಾಯಣ ಎ | ತುಮಕೂರು |
| ಸಿದ್ದರಾಮ | ಭೀಮಯ್ಯ | ಹತ್ತಿಕುಣಿ |
| ಬಾಲಾಜಿ ಪಿ ವಿ | ವೆಂಕಟೇಶ್ ಪಿ ಎಫ್ | ಚಳ್ಕೆರೆ |
| ಮನೋಜ್ ಬಿಜಾಪುರ | ಮಹಾಬಲೇಶ್ವರ ಎಸ್ ಬಿಜಾಪುರ | ಸುರೇಬಾನ |
| ನಿತಿನ್ ಎಂ ಎ | ಅಮರನಾಥ್ ಎಂ ಎ | ಚಿಂತಾಮಣಿ |
| ಅನುಷಾ ಎಂ ಜಿ | ಗೌರಿಶಂಕರ್ ಎಂ ಎ | ಚಿಂತಾಮಣಿ |
| ಪವನ್ ಗುಪ್ತಾ ಟಿ ಎಂ | ಮಂಜುನಾಥ್ ಎಫ್ ಬಿ | ಚಿಂತಾಮಣಿ |



ಕರ್ನಾಟಕ ಆರ್ಯವೈಶ್ಯ ಮಹಾಸಭಾ ಹಾಸ್ಟೆಲ್ ಮತ್ತು ಅತಿಥಿ ಗೃಹ, ಮೈಸೂರು

## ಮೈಸೂರು ಕಟ್ಟಡದ ಗೃಹಪ್ರವೇಶ ಧಾರ್ಮಿಕ ವಿಧಿ ವಿಧಾನಗಳು

**21–05–2023**

ಎಸ್ ಕೆ ಪಿ ಟೆಂಪಲ್ ಹತ್ತಿರ ಅಶೋಕ ರಸ್ತೆ
ಮೈಸೂರು– 1

# ಯುವ ಜನತೆಗೆ ಉದ್ಯಮಶೀಲತೆಯೆಡೆಗೆ ಭರವಸೆ ಮೂಡಿಸಿದ ಕಾರ್ಯಾಗಾರ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಮಾರ್ಗದರ್ಶನದಲ್ಲಿ ಯುವ ಸಬಲೀಕರಣ ವಿಭಾಗವು ದಿನಾಂಕ 9ನೇ ಏಪ್ರಿಲ್ 2023ರ ಭಾನುವಾರ ಬೆಂಗಳೂರು ನಗರದ ವಾಸವಿ ವಿದ್ಯಾನಿಕೇತನ ಕಾಲೇಜಿನ ಮಾರುತಿ ಸಭಾಂಗಣದಲ್ಲಿ ನಾಡಿನ ಆರ್ಯವೈಶ್ಯ ಸಮಾಜದ ಯುವಕ ಯುವತಿಯರ ಮುಂದಿನ ಉಜ್ವಲ ಭವಿಷ್ಯಕ್ಕಾಗಿ ಹಮ್ಮಿಕೊಂಡಿದ್ದ **ಇನ್ನೋವೇಷನ್ ಆನ್ ಇನ್‌ಕ್ಯುಬೇಶನ್ ಅಂಡ್ ಎಂಟರ್‌ಪ್ರೀನಿಯರ್‌ಶಿಪ್** ಎಂಬ ಒಂದು ದಿನದ ಕಾರ್ಯಾಗಾರಕ್ಕೆ ನಾಡಿನ ಮೂಲೆ ಮೂಲೆಗಳಿಂದ ಮಾರ್ಗದರ್ಶನ ಪಡೆಯಲು **ನಿರೀಕ್ಷೆಗೂ ಮೀರಿದ 220 ಆಸಕ್ತ ಯುವ ಮಿತ್ರರು ಆಗಮಿಸಿದ್ದು,** ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾದ ಸನ್ಮಾನ್ಯ ಆರ್ ಪಿ ರವಿಶಂಕರ್‌ರವರು ನಾಡಿನ ಆರ್ಯವೈಶ್ಯ ಯುವ ಜನಾಂಗದ ಪ್ರಗತಿಗಾಗಿ ಯಾವುದೇ ವಿಧದ ಪ್ರೋತ್ಸಾಹ ಮತ್ತು ಸಹಕಾರ ನೀಡಲು ಮಹಾಸಭೆಯು ಸದಾ ಸಿದ್ಧವಾಗಿದ್ದು, ಯುವಜನರಿಗಾಗಿಯೇ ಅವರ ವ್ಯಾಪಾರ ಮತ್ತು ಉದ್ಯಮಶೀಲತೆಯಂತಹ ಹಲವಾರು ಕ್ಷೇತ್ರಗಳಲ್ಲಿ ಸೂಕ್ತ ಮಾರ್ಗದರ್ಶನಕ್ಕಾಗಿ ಇನ್‌ಕ್ಯುಬೇಶನ್ ಸೆಂಟರ್ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ವಾಸವಿ ವಿದ್ಯಾನಿಕೇತನ ಟ್ರಸ್ಟಿನ **ಅಧ್ಯಕ್ಷರಾದ ಡಾ ಮಾನಂದಿ ಸುರೇಶ್ ರವರು ನೆರವೇರಿಸಿ ಇಂದಿನ ಆರ್ಯವೈಶ್ಯ ಯುವ ಜನಾಂಗದ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಹಾಗೂ ಯುವಕರು ಯಶಸ್ವಿ ವ್ಯಕ್ತಿಗಳಾಗಿ ರೂಪುಗೊಳ್ಳಲು ಮಾರ್ಗದರ್ಶನ ನೀಡಿದರು.** ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ ವೆಂಕಟೇಶ್ವರಲುರವರು **ಯುವಕರಿಗೆ ಉದ್ಯಮಶೀಲತೆಯಲ್ಲಿ ಯಶಸ್ಸು ಕಾಣಲು ಇನ್‌ಕ್ಯುಬೇಶನ್ ಸೆಂಟರ್ ಅತ್ಯಂತ ಉಪಯುಕ್ತವಾಗಿದ್ದು,** ಈಗಾಗಲೇ ತುಮಕೂರು ವಿಶ್ವವಿದ್ಯಾನಿಲಯದಲ್ಲೂ ಸಹ ಇಡೀ ತುಮಕೂರು ನಗರದ ಯುವಕರಿಗಾಗಿ ಪ್ರಾರಂಭಿಸಲಾಗುವುದು ಹಾಗೂ ಮುಂದಿನ ದಿನಗಳಲ್ಲಿ ಮಹಾಸಭೆಯ ಈ ಯೋಜನೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ಅತಿಥಿಗಳಾಗಿದ್ದ ವಾಸವಿ ವಿದ್ಯಾನಿಕೇತನ ಟ್ರಸ್ಟಿನ ಕಾರ್ಯದರ್ಶಿಗಳಾದ ಶ್ರೀ ಬಿ ಎಸ್ ಅರುಣ್‌ಕುಮಾರ್‌ರವರು ಮಹಾಸಭೆಯ ಯುವ ಸಬಲೀಕರಣವು ಉತ್ತಮ ಕಾರ್ಯಕ್ರಮವನ್ನು ಆಯೋಜಿಸಿದ್ದು, ಅದರ ಪ್ರಯೋಜನ ಪಡೆಯಲು ತಿಳಿಸಿದರು. ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಯುವ ಸಬಲೀಕರಣ ವಿಭಾಗದ ಛೇರ್ಮನ್ ಡಾ. ಎಂ ವಿ ಅಜಯ್ ಕುಮಾರ್, ಸಂಚಾಲಕರಾದ ಶ್ರೀ ಎಸ್ ಎನ್ ಶಬರೀಶ್ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಭಾಗವಹಿಸಿದ್ದರು.




ಶಿಬಿರದ ಉದ್ಘಾಟನೆ ನೆರವೇರಿಸಿದ ಡಾ॥ ಮನಂದಿ ಸುರೇಶ್ ಹಾಗೂ ಗಣ್ಯರು



ಶಿಬಿರದಲ್ಲಿ ಭಾಗವಹಿಸಿದ ದೊಡ್ಡ ಸಂಖ್ಯೆಯ ಶಿಬಿರಾರ್ಥಿಗಳು

ಕಾರ್ಯಾಗಾರದ ಮೊದಲ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಹಾಗೂ ಉತ್ತಮ ತರಬೇತುದಾರರಾದ ಪ್ರೊ. ಶಾರದ ಹೆಚ್ ಸೋಮಯಾಜಿರವರು ಪ್ರಸ್ತುತ ಸನ್ನಿವೇಶದಲ್ಲಿ ಇನ್‌ಕ್ಯುಬೇಶನ್ ಕೇಂದ್ರದ ಮಹತ್ವ ಮತ್ತು ಪ್ರಯೋಜನಗಳನ್ನು ವಿವರಿಸಿದರು. ನಂತರ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಎಲ್ಲಾ ಯುವಕ ಯುವತಿಯರಿಗೆ ಒಂದು ಕ್ರಿಯಾತ್ಮಕ ಚಟುವಟಿಕೆಯ ಮೂಲಕ ದಿನಪತ್ರಿಕೆಗಳಲ್ಲಿ ಬರುವ ವ್ಯಾಪಾರ ಮತ್ತು ಉದ್ಯಮಶೀಲತೆಯ ಮಾಹಿತಿಯನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಎರಡನೇ ಅವಧಿಯ ಪ್ಯಾನಲ್ ಚರ್ಚೆಯಲ್ಲಿ ಐ.ಐ.ಎಂ.ಎಸ್ ನಿರ್ದೇಶಕರಾದ ಎಸ್ ಶ್ರೀಧರನ್, ಎಫ್.ಕೆ.ಸಿ.ಸಿ.ಐ. ಮಾಜಿ ಅಧ್ಯಕ್ಷರಾಗಿದ್ದ ಶ್ರೀ ತಲ್ಲಂ ವೆಂಕಟೇಶ್‌ರವರು, ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಎಂ.ವೆಂಕಟೇಶ್ವರಲುರವರು ಹಾಗೂ ಉದ್ಯಮಶೀಲತೆಯ ಉತ್ತಮ ತರಬೇತುದಾರರಾದ ಶ್ರೀ ಶಾಂತನ್ ಮಾಲಶೆಟ್ಟರ್ ರವರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ನಂತರ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಯುವ ಮಿತ್ರರಿಗೆ ವ್ಯಾಪಾರ, ಉದ್ಯಮಶೀಲತೆಗೆ ಸಂಬಂಧಿಸಿದ ಸಾಕಷ್ಟು ಪ್ರಶ್ನೆಗಳು ಮತ್ತು ಗೊಂದಲಗಳಿಗೆ ಉತ್ತಮವಾದ ಸಲಹೆ ಮತ್ತು ಮಾರ್ಗದರ್ಶನ ನೀಡಿದರು. ಯುವಮಿತ್ರರಿಗೆ ಇದು ಉತ್ತಮ ಸ್ಫೂರ್ತಿಯನ್ನು ನೀಡಿದ್ದು, ಮುಂದಿನ ದಿನಗಳಲ್ಲಿ ಒಂದು ಹೊಸ ಉದ್ಯಮವನ್ನು ಪ್ರಾರಂಭಿಸಲು ಅಥವಾ ಈಗಿರುವ ಉದ್ಯಮವನ್ನು ಉತ್ತಮಪಡಿಸಲು ಮಾರ್ಗಸೂಚಿಯಾಯಿತು. ಭಾಗವಹಿಸಿದ್ದ ಯುವಜನತೆಯಿಂದ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿತು. ಇದರ ಮುಂದಿನ ಭಾಗವಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಯುವ ಸಬಲೀಕರಣ ವಿಭಾಗವು ಹಲವಾರು ಹಂತಗಳಲ್ಲಿ ನಾಡಿನ ಆರ್ಯವೈಶ್ಯ ಯುವಜನತೆಯ ಸಬಲೀಕರಣಕ್ಕಾಗಿ ಗುಣಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಮುಂದಿನ ದಿನಗಳಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಇನ್‌ಕ್ಯಬೇಶನ್ ಕೇಂದ್ರವನ್ನು ಪ್ರಾರಂಭಿಸುವ ಮೂಲಕ ಹಲವಾರು ಯುವಕರ ಬಾಳನ್ನು ಬೆಳಗಿಸುವ ನಂದಾದೀಪವಾಗಲಿದೆ. ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಮಹಾಸಭೆಯ ಪದಾಧಿಕಾರಿಗಳಿಗೂ, ಗಣ್ಯರಿಗೂ, ಎಲ್ಲಾ ಯುವ ಮಿತ್ರರಿಗೂ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ಹೃತ್ಪೂರ್ವಕ ಧನ್ಯವಾದಗಳು.

ವರದಿ:
ಡಾ. ಅಜಯ್ ಕುಮಾರ್ ಎಂ.ವಿ.
ಕರ್ನಾಟಕ ಆರ್ಯವೈಶ್ಯ ಮಹಾಸಭೆ
ಯುವ ಸಬಲೀಕರಣ ವಿಭಾಗ




# ವಾಸವಿ ಜಯಂತಿಯ ಶುಭಾಶಯಗಳು

**ಮಾ**ನವ ಕೋಟಿಗೆ ವಿಶ್ವರೂಪ ದರ್ಶನ ಭಾಗ್ಯ ನೀಡಿ ಮನುಕುಲಕ್ಕೆ ಶಾಂತಿ ಸಂದೇಶ ನೀಡಿದ ಪ್ರಪ್ರಥಮ ಮಹಿಳಾ ಸತ್ಯಾಗ್ರಹಿ ಜಗನ್ಮಾತೆ ಶ್ರೀ ವಾಸವಿ ಕನ್ಯಾಕಾಪರಮೇಶ್ವರಿ ದೇವಿಯು ಭುವಿಯಲ್ಲಿ ಜನ್ಮ ತಾಳಿದ ಶುಭದಿನ **ವಾಸವಿ ಜಯಂತಿ.**

ಇದೇ **30.4.2023** ರ ಭಾನುವಾರ ವಿಶ್ವದೆಲ್ಲೆಡೆ ಇರುವ ಆರ್ಯವೈಶ್ಯ ಬಂಧುಗಳು ಶ್ರದ್ಧೆ ಭಕ್ತಿಗಳಿಂದ ಶ್ರೀಮಾತೆಯನ್ನು ಆರದಿಸುವ ಈ ಪುಣ್ಯ ದಿನದಂದು ಹತ್ತು ಹಲವು ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುವ ಮೂಲಕ ವಾಸವಿ ಜಯಂತಿ ಆಚರಣೆಗೆ ಮೆರಗು ಬರುವಂತೆ ಕಾರ್ಯನಿರ್ವಹಿಸಲು ಮಹಾಸಭಾ ಕೋರುತ್ತದೆ.

# ಯುವ ಜನತೆಯ ಭವ್ಯ ಭವಿಷ್ಯಕ್ಕೆ –ಉದ್ಯೋಗ ಮಿತ್ರ





ತರಬೇತಿಯಲ್ಲಿ ನಿರತರಾಗಿರುವ ಉದ್ಯೋಗ ಮಿತ್ರ ವಿದ್ಯಾರ್ಥಿಗಳು

**ನಾ**ನಾ ಕಾರಣಗಳಿಂದ ಎಸ್.ಎಸ್.ಎಲ್.ಸಿ ನಂತರ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದೇ, ಅಥವಾ ಉನ್ನತ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ತಮ್ಮ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿರುವ ನಮ್ಮ ಯುವ ಜನತೆಗೆ ಆಧುನಿಕ ತಂತ್ರಜ್ಞಾನದ ವಿಷಯದ ಬಗ್ಗೆ 4 ತಿಂಗಳುಗಳ ಉಚಿತ ತರಬೇತಿ ನೀಡಿ ಉದ್ಯೋಗ ಕೊಡಿಸುವ ಮೂಲಕ ಚಿಂತೆಯ ಕತ್ತಲಿನಿಂದ ಭವಿಷ್ಯದ ಬೆಳಕಿನೆಡೆಗೆ ಕರೆತರುವ ಮಹತ್ವಪೂರ್ಣ ಯೋಜನೆ **ಉದ್ಯೋಗಮಿತ್ರ.**

ಈ ಮಹತ್ವಪೂರ್ಣ ಯೋಜನೆಗೆ ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭೆಯು ಆಸಕ್ತಿಯುಳ್ಳ ಯುವಜನತೆಯನ್ನು ಸಂಘಟಿಸುವಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ತರಬೇತಿ ಕಾರ್ಯಕ್ರಮಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಬೆಂಗಳೂರಿಗೆ ಕರೆತಂದು 4 ತಿಂಗಳುಗಳ ಕಾಲ ಉಚಿತ ವಸತಿ & ಊಟೋಪಚಾರದ ವ್ಯವಸ್ಥೆಯೊಂದಿಗೆ ಮಹಾಸಭೆಗೆ ದೊಡ್ಡಶಕ್ತಿಯಾಗಿ ನಿಂತದ್ದು ಶ್ರೀ ವಾಸವಿ ವೇದ ಪಾಠಶಾಲೆಯ ಆಡಳಿತವರ್ಗ, ಇನ್ನು ಉಳಿದಂತೆ ಅತ್ಯಂತ ಪ್ರಮುಖವಾಗಿ ತಾಂತ್ರಿಕ ಶಿಕ್ಷಣ ನೀಡಿ, ಉತ್ತಮ ಕಂಪನಿಗಳಲ್ಲಿ ಉದ್ಯೋಗವನ್ನು ಕೊಡಿಸುವಂತಹ ಮಹತ್ತರ ಜವಾಬ್ದಾರಿಯನ್ನು **ಶ್ರೀ ಶ್ಯಾಮಸುಂದರ ಗುಪ್ತರವರ ಗುಪ್ತ ಎಜುಕೇಷನ್ ಸೊಸೈಟಿ** ಈ ಎಲ್ಲಾ ಸಂಸ್ಥೆಗಳ ಪರಸ್ಪರ ಸಹಕಾರದಿಂದ ಈಗಾಗಲೇ ಮೊದಲನೇ ಬ್ಯಾಚ್ ತರಬೇತಿಯನ್ನು ಪಡೆಯುತ್ತಿದೆ. ಮುಂದಿನ ದಿನಗಳಲ್ಲಿ ನೂರಾರು ಬಡ ವಿದ್ಯಾರ್ಥಿಗಳ ಭವಿಷ್ಯದ ಆಶಾಕಿರಣ ಉದ್ಯೋಗಮಿತ್ರ ಯೋಜನೆಯಾಗಲಿದೆ. ತಮಗೆ ತಿಳಿದಿರುವ ಆರ್ಥಿಕವಾಗಿ ಹಿಂದುಳಿದಿರುವ ಯಾವುದೇ ಯುವಕರು ಪಿ.ಯು.ಸಿ, ಡಿಗ್ರಿ ಶಿಕ್ಷಣದಲ್ಲಿ ಅರ್ಧಕ್ಕೆ ನಿಲ್ಲಿಸಿದ್ದಲ್ಲಿ ಅಥವಾ ಹೊಸತನವನ್ನು ಕಲಿಯಬೇಕೆಂಬ ಇಚ್ಛೆಯಿದ್ದಲ್ಲಿ ಅವರಿಗೆ ವಿಷಯ ಮುಟ್ಟಿಸಿ ಈ ಯೋಜನೆಯ ಉಪಯೋಗ ಪಡೆದುಕೊಳ್ಳಲು ತಿಳಿಸಿ, ಸಹಕರಿಸಿ.


iSpeak
Strategic Consultancy
– Business Doctor

ನಿಮ್ಮ ವ್ಯಾಪಾರ ವ್ಯವಹಾರದಲ್ಲಿ ಮೈಲಿಗಲ್ಲನ್ನು ಸ್ಥಾಪಿಸಲು ಬಯಸುವಿರಾ???

ನಿಮ್ಮ ವ್ಯಾಪಾರ ವ್ಯವಹಾರದಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಬಯಸುವಿರಾ???

ಹಾಗಾದರೆ
BUSINESS DOCTOR COMMUNITYಗೆ
ಸೇರಿಕೊಳ್ಳಲು ಈ ಕೆಳಗಿನ
QR CODE ಅನ್ನು SCAN ಮಾಡಿ



ನಿಮ್ಮ Business Doctor
SHANTHAN MALASHETTER S
PH: 9686241493

ADTV


# ಶ್ರೀ ಕನ್ಯಕಾಪರಮೇಶ್ವರಿ ದೇವಾಲಯ



8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03

ಇದರ ಆಶ್ರಯದಲ್ಲಿ



## ಶ್ರೀ ವಾಸವಿ ಸಹಸ್ರ ಭಜನೋತ್ಸವ

**ದಿನಾಂಕ: 23–04–2023 ರಿಂದ ಪ್ರಾರಂಭ**

ವೈಶಿಷ್ಟ್ಯ ಪೂರ್ಣ ಧಾರ್ಮಿಕ ಸೇವೆಗಳಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿರುವ ಮಲ್ಲೇಶ್ವರಂ ಆರ್ಯವೈಶ್ಯ ಸಂಘದ ನೇತೃತ್ವದಲ್ಲಿ ಮತ್ತೊಂದು ಮಹೋನ್ನತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

1008 ಭಜನಾ ತಂಡಗಳಿಂದ 500 ದಿನಗಳ ನಿರಂತರ ಭಜನೋತ್ಸವವನ್ನು ನಡೆಸಲಾಗುತ್ತದೆ. ದಿನಾಂಕ: 23–04–2023ರ ಭಾನುವಾರ ಶ್ರೀ ವಾಸವಿ 'ಸಹಸ್ರ ಭಜನೋತ್ಸವ' ಲೋಕಾರ್ಪಣೆ ಮಾಡಲಾಗುತ್ತದೆ. ಸರ್ವ ಸಮುದಾಯದವರು, ವಯೋಮಿತಿಯ ಅಂತರವಿಲ್ಲದೆ ತಮ್ಮ ಭಕ್ತಿ ಭಾವಗಳ ಭಜನಾ ಗೀತೆಗಳನ್ನು ಸಮರ್ಪಣೆ ಮಾಡಲು ಅವಕಾಶ ಮಾಡಿಕೊಡಲಾಗಿದೆ.

> ಪ್ರತಿ ಸೋಮವಾರ ದಿಂದ ಶುಕ್ರವಾರ ಸಂಜೆ 5:30 ರಿಂದ 7:30ರ ವರೆವಿಗೂ ಎರಡು ತಂಡಗಳು.

> ಶನಿವಾರ ಮತ್ತು ಭಾನುವಾರ ದಂದು ಬೆಳಗ್ಗೆ 10:30 ರಿಂದ 1:30ರ ವರೆವಿಗೂ 3 ತಂಡಗಳು, ಸಂಜೆ 5:00 ರಿಂದ 7:00 ಘಂಟೆವರೆವಿಗೂ 2 ತಂಡಗಳು ಹಾಡಲು ಅವಕಾಶವಿರುತ್ತದೆ.

### ಭಾಗವಹಿಸಲು ಇಚ್ಛಿಸುವರಿಗೆ ವಿಶೇಷ ಸೂಚನೆ

ಶ್ರೀ ವಾಸವಿ ಸಹಸ್ರ ಭಜನೋತ್ಸವದಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ತಂಡಗಳು,
ಶ್ರೀಮತಿ ಉಮಾ ಜಿ ರಾಜುಲು, 9844117757
ಶ್ರೀಮತಿ ತಾರಾಸುಬ್ರಮ್ಮಣ್ಯ, 9113573360 ಶ್ರೀಮತಿ ಅನುರಾಧ, 9341347149
ರವರನ್ನು ಸಂಪರ್ಕಿಸಲು ಕೋರಿದೆ.



ಪಿ ಎನ್ ಗೋವಿಂದ ರಾಜಲು
ಅಧ್ಯಕ್ಷರು

ಲೋಕಕಲ್ಯಾಣಾರ್ಥವಾಗಿ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮ ಸೇವೆಯನ್ನು ಸಲ್ಲಿಸಿ,ಶ್ರೀ ವಾಸವಿ ಮಾತೆಯ ಅನುಗ್ರಹಕ್ಕೆ ಪಾತ್ರರಾಗಲು ಕೋರುತ್ತೇವೆ.



ರಾ ಪ ರವಿಶಂಕರ್
ಕಾರ್ಯದರ್ಶಿ

ADTV

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152